International Journal of Kannada Research
www.kannadajournal.com

**ISSN: 2454–5813**
IJKR 2024; 10(3): 01-05
© 2024 IJKR
www.kannadajournal.com
Received: 01-05-2024
Accepted: 04-06-2024

**ಕೆ. ಮಹೇಶ್ವರಪ್ಪ**
ಸಂಶೋಧನಾ ವಿದ್ಯಾರ್ಥಿ ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮುಕ್ತಗಂಗೋತ್ರಿ, ಮೈಸೂರು, ಕರ್ನಾಟಕ, ಭಾರತ

**Corresponding Author:**
**ಕೆ. ಮಹೇಶ್ವರಪ್ಪ**
ಸಂಶೋಧನಾ ವಿದ್ಯಾರ್ಥಿ ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮುಕ್ತಗಂಗೋತ್ರಿ, ಮೈಸೂರು, ಕರ್ನಾಟಕ, ಭಾರತ

# ಕುವೆಂಪು ಅವರ ಆಧ್ಯಾತ್ಮಿಕ ದೃಷ್ಟಿಯ ಒಳನೋಟ

**ಕೆ. ಮಹೇಶ್ವರಪ್ಪ**

**DOI:** https://doi.org/10.22271/24545813.2024.v10.i3a.979

**ಪೀಠಿಕೆ**

ಕವಿ ಕುವೆಂಪು ಅವರು ಪ್ರಕೃತಿಯ ಉಪಾಸಕರಾಗಿದ್ದು, ಬಾಲ್ಯದಿಂದಲೇ ನಿಸರ್ಗದ ಅನಂತಮುಖಗಳಲ್ಲಿ ವ್ಯಕ್ತವಾಗುತ್ತಿರುವ ಸೃಷ್ಟಿಕರ್ತನ ನವಿಲ ನರ್ತನವನ್ನು ನೋಡಿ ತಣಿಯುತ್ತಾ ಬೆಳೆದುಬಂದವರು. ಬೆಳೆಯುತ್ತಾ ಬೆಳೆಯುತ್ತಾ ಪ್ರಕೃತಿಯೊಡನೆ ಅನುರಕ್ತಿಯನ್ನು ಬೆಳೆಸಿಕೊಂಡು ಆರಾಧಿಸುತ್ತಾ ಜಡ ಚೇತನಗಳಿಗೆ ಯಾವುದೇ ವ್ಯತ್ಯಾಸ ಇರುವುದಿಲ್ಲವೆಂಬ ದೃಢವಿಶ್ವಾಸವನ್ನು ಹೊಂದಿ ಸರ್ವವನ್ನು ಸಮದರ್ಶನದಲ್ಲಿ ಪರಿಭಾವಿಸಿದ ಅನುಭಾವಿಯಾಗಿದ್ದರು. ಕುಪ್ಪಳಿಯ ರಮ್ಯ ಪರಿಸರದಲ್ಲಿ ಬೆಳೆದ ಕುವೆಂಪು ಅವರ ಮೇಲೆ ನಿಸರ್ಗದ ಪ್ರಭಾವ ಅತ್ಯಂತ ಗಾಢವಾದದು. ನಿಸರ್ಗವನ್ನು ನೋಡುತ್ತಲೇ ಬೆಳೆದ ಕುವೆಂಪು ಏಕಾಂಗಿಯಾಗಿ ಪ್ರಕೃತಿಯೊಡನೆ ಅನುಸಂಧಾನ ನಡೆಸಿ ಆತ್ಮೋದ್ಧಾರವನ್ನು ಮಾಡಿಕೊಂಡು ಆ ಮೂಲಕ ಲೋಕೋದ್ಧಾರಕ್ಕೆ ತಮ್ಮದೇ ಆದ ಕೊಡುಗೆ ಕೊಟ್ಟವರು. ಸಹ್ಯಾದ್ರಿಯ ಪರ್ವತ ಶ್ರೇಣಿಗಳಲ್ಲಿ ಕಂಡ ನಿಸರ್ಗಾನುಭವಗಳನ್ನು, ಗಿರಿವನ ಪ್ರಪಂಚದ ರುದ್ರರಮಣೀಯ ಸೌಂದರ್ಯದ ವಿಲಾಸಗಳನ್ನು, ದಟ್ಟ ಕಾನನಗಳಲ್ಲಿರುವ ಪ್ರಾಣಿ ಪಕ್ಷಿಗಳು, ಕ್ರಿಮಿ ಕೀಟಾದಿಗಳ ಚಲನ ವಲನಗಳನ್ನು, ಸಾವಿರಾರು ಸೂರ್ಯೋದಯ, ಸೂರ್ಯಾಸ್ತಗಳನ್ನು ಕಂಡ ಕವಿ ಅವುಗಳ ಸೌಂದರ್ಯಾನುಭವವನ್ನು ಅವರ ಕವಿತೆಗಳಲ್ಲಿ ಅದ್ಭುತವಾಗಿ ಚಿತ್ರಿಸಿದ್ದಾರೆ. ಪ್ರಕೃತಿಯೊಡನೆ ಪಡೆದುಕೊಂಡ ಅವರ ಈ ಅನುಭವಗಳು ಆಧ್ಯಾತ್ಮಿಕ ನೆಲೆಯನ್ನು ತಲುಪುತ್ತವೆ. 'ಮೃಣ್ಮಯದ ಹೃದಯದಲಿ ಚಿನ್ಮಯನಿಹನು' ಎಂದು ನಂಬಿದ ಕವಿ "ಶಿವ ಶಿವಾ, ಕಣ್ದೆರದು ಪ್ರಕೃತಿ ಸೌಂದರ್ಯಮಂ ಭಾವನೋಜ್ವಲವಾಗಿ ನೋಡದಿಹ ಬಾಳೊಂದು ಬಾಳಲ್ಲ! "ಸೊಬಗಿನಲಿ ಶಿವನಿಹನು; ಶಿವನೆ ಸೊಬಗಾಗಿಹನು." (ಪಕ್ಷಿಕಾಶಿ, ಪ್ರಕೃತಿ ಉಪಾಸನೆ – ಕುವೆಂಪು) ಎಂಬ ತತ್ತ್ವವನ್ನು ತನ್ನ ಬಹುಪಾಲು ಕವಿತೆಗಳಲ್ಲಿ ಪ್ರಸ್ತುತಪಡಿಸಿದ್ದಾರೆ.

ಕುವೆಂಪು ಇಪ್ಪತ್ತನೆಯ ಶತಮಾನದ ಮಹತ್ವಪೂರ್ಣ ಕವಿಯಷ್ಟೇ ಅಲ್ಲ, ಶ್ರೇಷ್ಠ ವಿಚಾರವಂತರೂ ವೈಜ್ಞಾನಿಕ ದೃಷ್ಟಿಕೋನ ಉಳ್ಳವರೂ, ಉತ್ತಮ ದಾರ್ಶನಿಕರೂ ಆಗಿದ್ದರು. ಅವರ ಅಧ್ಯಾತ್ಮದ ಕೇಂದ್ರಿತ ದೃಷ್ಟಿ ಉಪನಿಷತ್ತು, ಭಗವದ್ಗೀತೆಗಳಿಂದ ಮಾತ್ರವಲ್ಲದೆ ಆಧುನಿಕ ವಿಜ್ಞಾನದ ತಿಳುವಳಿಕೆಯಿಂದ ರೂಪಿಸಿಕೊಂಡದ್ದು ಆಗಿತ್ತು. ಅಲ್ಲದೆ ಶ್ರೀ ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಶ್ರೀಮಾತೆ ಶಾರದಾದೇವಿ, ಮಹಾನ್ ಯೋಗಿ ಅರವಿಂದರು, ಮಹಾತ್ಮಾ ಗಾಂಧೀಜಿಯವರಂತಹ ವಿಭೂತಿ ಪುರುಷರ ಚಿಂತನೆ ಮತ್ತು ಬದುಕಿನಿಂದ ಪ್ರಭಾವಿತವಾಗಿ ಪೋಷಣೆ ಪಡೆದದ್ದಾಗಿತ್ತು. ಅಷ್ಟೇ ಅಲ್ಲದೆ ಜೀವನ ಮೌಲ್ಯಗಳ ಕುರಿತು ಆಳವಾಗಿ ವಿವರಿಸುವ ದೇಶಿಯ ಮತ್ತು ಪಾಶ್ಚಿಮಾತ್ಯ ತತ್ತ್ವಶಾಸ್ತ್ರವನ್ನು ವಿಶೇಷವಾಗಿ ಅಧ್ಯಯನ ಮಾಡಿದ ಕುವೆಂಪು ತತ್ವಶಾಸ್ತ್ರಗಳಿಂದಲೂ ಆಧ್ಯಾತ್ಮಿಕವಾಗಿ ಹೆಚ್ಚು ಪ್ರಭಾವಿತರಾಗಿದ್ದಾರೆ.

ಮಹಾಕವಿ ಕುವೆಂಪು ಅವರ ಬದುಕಿನ ಗುರಿ ಮತ್ತು ಮಾರ್ಗ ಅಧ್ಯಾತ್ಮದ ಸಾಧನೆಯೇ ಆಗಿದ್ದಿತು. ಅವರು ತೋರಿದ ದಾರಿ ಮತಧರ್ಮವನ್ನು ಆಶ್ರಯಿಸದ ಅಧ್ಯಾತ್ಮ. ಇದು ಇಂದಿಗೂ ಸಹ ಅತ್ಯುನ್ನತ ಜ್ಞಾನದ ಶಿಖರಕ್ಕೆ ಹೋಗುವ ಹೆದ್ದಾರಿ. ಸದಾ ಸೌಂದರ್ಯಾಧನೆಯಲ್ಲಿ ತೊಡಗಿ ಭಗವದ್ದರ್ಶನದಲ್ಲಿ ಮಗ್ನರಾಗಿರುತ್ತಿದ್ದ ಕವಿಯ ಸಾಹಿತ್ಯ ಕೃತಿಗಳಲ್ಲಿ ಅದರಲ್ಲೂ ಕಾವ್ಯದಲ್ಲಿ ಆಧ್ಯಾತ್ಮಿಕ ಛಾಯೆ ನಿರಂತರವಾಗಿ ಪ್ರಕಾಶಿಸುತ್ತಿದೆ.

ರಸಋಷಿ ಕುವೆಂಪು ಅವರು ಅಧ್ಯಾತ್ಮವನ್ನು ವೈಚಾರಿಕತೆಗೆ ಒಳಪಡಿಸಿ, ಸತ್ಯಾನ್ವೇಷಣೆ ಮಾಡಿ ಆ ಮೂಲಕ ತಾನು ಕಂಡುಕೊಂಡ ಆಧ್ಯಾತ್ಮಿಕ ದೃಷ್ಟಿಯನ್ನು ತಮ್ಮ ಕಾವ್ಯದಲ್ಲಿ ಪ್ರತಿಬಿಂಬಿಸಿದ್ದಾರೆ. ಹಿಂದೂ ಧರ್ಮಕ್ಕೆ ಅಂಟಿಕೊಂಡೇ ಬಂದಿರುವ ವರ್ಣವ್ಯವಸ್ಥೆ, ಜಾತಿ ಪದ್ಧತಿ, ಅಸ್ಪೃಶ್ಯತೆಗಳು ನಿರ್ಮೂಲನೆಯಾಗದ ಹೊರತು ಹಿಂದೂ ಧರ್ಮ ಶ್ರೇಷ್ಠ ಧರ್ಮವಾಗುವುದಿಲ್ಲವೆಂದು ನಿರ್ಣಯಿಸಿದ ಕವಿ 'ಮತ ತೊಲಗಿ ಅಧ್ಯಾತ್ಮ ಮಾತ್ರ ವೈಜ್ಞಾನಿಕ ತತ್ವವಾಗಿ ಮಾನ್ಯತೆ ಪಡೆಯಬೇಕು' ಎಂಬ ಸರ್ವಕಾಲಿಕ ಮೌಲ್ಯವನ್ನು ಅವರ ಸಪ್ತ ಸೂತ್ರಗಳಲ್ಲಿ ಪ್ರಚುರ ಪಡಿಸಿ "ಮತ ಮನುಜಮತವಾಗಬೇಕು, ಪಥ ವಿಶ್ವಪಥವಾಗಬೇಕು, ಮನುಷ್ಯ ವಿಶ್ವ ಮಾನವನಾಗಬೇಕೆಂಬ ಅತ್ಯಮೂಲ್ಯ ವಿಶ್ವ ಮಾನವ ಸಂದೇಶವನ್ನು ಇಡೀ ಜಗತ್ತಿಗೆ ನೀಡಿದ್ದಾರೆ" ಇದು ಮಹಾಕವಿ ಕುವೆಂಪು ಅವರ ಕಾಣ್ಕೆಯಾಗಿದೆ. ಕಾಡಿನ ಕವಿಯಾದ ಕುವೆಂಪು 'ಪ್ರಕೃತಿಯಾರಾಧನೆಯೇ ಪರಮನಾರಾಧನೆ' ಎಂದು ನಂಬಿದವರು. ಕುವೆಂಪು ಅವರ ನೇರ ಶಿಷ್ಯರಾದ ಜಿ.ಎಸ್ ಶಿವರುದ್ರಪ್ಪನವರು ಹೇಳುವಂತೆ– "ದೇವಾಲಯ, ದೇವರು, ಪೂಜೆ, ಧರ್ಮ ಇತ್ಯಾದಿಗಳ ಬಗ್ಗೆ ಇರುವ ಸಾಂಪ್ರದಾಯಿಕ ಕಲ್ಪನೆಗಳನ್ನು ನಿರಾಕರಿಸಿ ಅವುಗಳ ಸ್ಥಾನದಲ್ಲಿ ನಿಸರ್ಗ ಸೌಂದರ್ಯವನ್ನು ಸ್ಥಾಪಿಸುವ ಕುವೆಂಪು ಅವರ ಧೋರಣೆ ಒಂದು ರೀತಿಯಲ್ಲಿ ಕ್ರಾಂತಿಕಾರಕವಾದುದೆನ್ನಬೇಕು. ಅವರ ಪ್ರಕಾರ ಭುವನವೇ ದೇವಾಲಯ, ಸೌಂದರ್ಯವೇ ದೇವರು, ಸೌಂದರ್ಯಾನುಭವವೇ ಆರಾಧನೆ. ಜಪ ತಪ ಪೂಜೆ ಪ್ರಾರ್ಥನೆಗಳಿಂದ ಏನೇನು ಲಭಿಸುವುದೆಂದು ಹಳೆಯಧರ್ಮ ಹೇಳುತ್ತಿತ್ತೋ ಅವೆಲ್ಲವೂ ಈ ನಿಸರ್ಗ ಸೌಂದರ್ಯವನ್ನು ಕಣ್ತೆರೆದು ಆಸ್ವಾದಿಸಿ ಅನುಭವಿಸುವುದರಿಂದ ಲಭಿಸುತ್ತವೆ ಎನ್ನುತ್ತಾರೆ ಕುವೆಂಪು." (ಪುಟ ೩೦೩, ಜಿ.ಎಸ್ ಶಿವರುದ್ರಪ್ಪ, ಸಮಗ್ರ ಗದ್ಯ ಸಂಪುಟ–೨, ಸ್ನೇಹ ಪ್ರಕಾಶನ, ಬೆಂಗಳೂರು, ೧೯೯೪). ಈ ವಾಕ್ಯಗಳು ಕುವೆಂಪು ಅವರ ದೃಷ್ಟಿಯಲ್ಲಿ ಪ್ರಕೃತಿ ಹಾಗೂ ಅಧ್ಯಾತ್ಮ ಪರಸ್ಪರ ಪೂರಕ, ಪ್ರೇರಕ ಹಾಗೂ ಪೋಷಕವೆಂಬುದನ್ನು ಸಾಬೀತುಪಡಿಸುತ್ತವೆ.

ಕುವೆಂಪು ಅವರು ಜಡವಸ್ತುಗಳಲ್ಲಿ ಹಾಗೂ ಚೈತನ್ಯಶೀಲಾ ವಸ್ತುಗಳಲ್ಲಿ ತಾರತಮ್ಯವಿದೆ ಎಂಬುದನ್ನು ಅಲ್ಲೆಗಳೆದು;

ಹನಿಯನು ನಾನನುಭವಿಸುವ ಪ್ರೀತಿ
ಆ ಹನಿ ನನ್ನನು ರಮಿಸುವ ರೀತಿ!
ನನ್ನಡಿ ಸೋಂಕಿಹ ಈ ಹುಲ್ಲು
ಇನಿಯನ ತುಟಿಸೋಂಕನೆ ಸವಿಯುತ್ತಿದೆ!
ಪ್ರೀತಿಯ ಮುತ್ತಿಗೆ ಹಾತೊರೆಯುತ್ತಿದೆ
ಚೇತನ ಮೂರ್ತಿಯು ಆ ಕಲ್ಲು:–
ತೆಗೆ! ಜಡವೆಂಬುದೆ ಬರಿ ಸುಳ್ಳು!
(ಪಕ್ಷಿಕಾಶಿ, ಶರತ್ಕಾಲದ ಸೂರ್ಯೋದಯದಲಿ – ಕುವೆಂಪು).

ಎಂದು ಹೇಳುತ್ತಾ ಪ್ರಕೃತಿಯಲ್ಲಿರುವ ಪ್ರತಿ ವಸ್ತುವೂ ಮುಖ್ಯವಾದದ್ದು ಆಗಿರುವುದರಿಂದ ಯಾವುದನ್ನು ಅನುಲಕ್ಷಿಸಬಾರದು ಎಂಬ ಸಂದೇಶವನ್ನು ಸಾರಿದ್ದಾರೆ. ಅಲ್ಲದೆ 'ಜಡವೆಂಬುದೆಲ್ಲಾ ಚೇತನದ ನಟನೆಯ ಲೀಲೆ' ಎಂಬುದನ್ನು ಸಾಕ್ಷಾತ್ಕರಿಸಿಕೊಂಡು ಈ ಅಬೇಧ ಕಲ್ಪನೆಯಿಂದ ಅದ್ವೈತದ ಪರಿಕಲ್ಪನೆಯನ್ನು ಪ್ರತಿಪಾದಿಸಿದ್ದಾರೆ.

ಪ್ರಕೃತಿಗೂ, ದೈವಕ್ಕೂ ಯಾವುದೇ ವ್ಯತ್ಯಾಸವನ್ನು ಕಲ್ಪಿಸದ ಕುವೆಂಪು ಅವರ ಪ್ರಕೃತಿ ಆರಾಧನೆ ಅಂತಿಮವಾಗಿ ದೈವೀಕರಣಗೊಂಡು ದೈವದ ಆರಾಧನೆಯಾಗಿ ರೂಪುಗೊಳ್ಳುತ್ತದೆ. 'ಸೂರ್ಯೋದಯ ಮತ್ತು ಚಂದ್ರೋದಯವನ್ನು ದೇವರ ದಯ'ವೆಂದು ಕರೆದಿರುವ ಕವಿ;

ಯಾವ ಗುಡಿ ಮಿಗಿಲು ಈ
ಭುವನ ದೇವಾಲಯಕೆ? ಮೇಣಾವ
ವಿಗ್ರಹಂ ಮೀರಿರುವುದೀ ಚೈತ್ರ ಪಂಚಮಿಯ
ಪುಣ್ಯ ಪ್ರಭಾತದಲಿ, ದೂರದ ದಿಗಂತದಿಂ
ಪ್ರತ್ಯಕ್ಷವಾಗಿರುವ ಭವ್ಯ ಸುಂದರ ದಿವ್ಯ
ಸೂರ್ಯದೇವನಿಗೆ? – (ಪಕ್ಷಿಕಾಶಿ – ಪ್ರಕೃತಿ ಉಪಾಸನೆ)

ಈ ಭುವನವನ್ನೇ ದೇವಾಲಯವೆಂದು ಕವಿ ಭಾವಿಸಿದ್ದು, ಸಂಪ್ರದಾಯದ ಪೂಜೆ ನಿಸರ್ಗ ಭಾಷೆಯಾಗಿ ರೂಪಾಂತರಗೊಳ್ಳುತ್ತದೆ. ಅಷ್ಟೇ ಅಲ್ಲದೆ ಈ ಕವನದಲ್ಲಿ 'ಸತ್ಯದಲಿ ಶಿವವಿಹುದು: ಶಿವದಲ್ಲಿ ಸತ್ಯವಿದೆ: ಮೇಣೆರಡು ಸೌಂದರ್ಯದಲಿ ಲೀನವಾಗಿಹೆವು, ತಿಳಿದವಗೆ ಒಂದನುಳಿದೊಂದಿಲ್ಲ' ಎಂದು ಸತ್ಯಂ ಶಿವಂ ಸುಂದರಂ ಎಂಬ ಶಾಶ್ವತ ಸತ್ಯವನ್ನು ಸಾರುತ್ತಾರೆ.

ಕುಪ್ಪಳ್ಳಿಯ ಕವಿಶೈಲದಲ್ಲಿ ಕುಳಿತು ತೆರೆತೆರೆಯಾಗಿ ಹಬ್ಬಿರುವ ಪರ್ವತಾರಣ್ಯಗಳನ್ನು ಕಂಡು ರಸಾನುಭೂತಿಯನ್ನು ಪಡೆಯುತ್ತಿದ್ದ ಕವಿ ಪ್ರಕೃತಿ ಸಂರಕ್ಷಣೆ ಕುರಿತಂತೆ ಅತೀವ ಕಾಳಜಿ ಹೊಂದಿದ್ದರು. ಒಂದು ಬಾರಿ ಸರ್ಕಾರದ ವತಿಯಿಂದ ಆ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ದೃಷ್ಟಿಯಿಂದ ಈ ಕಾಡಿನಲ್ಲಿ ಡಾಂಬರು ರಸ್ತೆಯನ್ನು ಮಾಡಬೇಕೆಂದು ಹಾಗೂ ಕೆಲವು ಸುಧಾರಣಾ ಕಾರ್ಯಗಳನ್ನು ಮಾಡುವ ಬಗ್ಗೆ ಕುವೆಂಪು ಅವರೊಂದಿಗೆ ಚರ್ಚಿಸಿದಾಗ ಅವರು ಕಾಡಿನಲ್ಲಿ ಕಾಲುದಾರಿಯೇ ಸಾಕು, ಡಾಂಬರು ರಸ್ತೆ ಬೇಡವೆಂದು, ಈ ಪರ್ವತಾರಣ್ಯಗಳ ಮನಮೋಹಕ ದೃಶ್ಯಾವಳಿಗಳಿಗೆ ಯಾವುದೇ ಧಕ್ಕೆ ತರುವಂತಹ ಹಾಗೂ ಇದರಲ್ಲಿರುವ ಜೀವವೈವಿಧ್ಯಕ್ಕೆ ತೊಂದರೆಯಾಗುವ ಯಾವುದೇ ಕಾರ್ಯಕ್ರಮಗಳನ್ನು ರೂಪಿಸಬಾರದೆಂದು, ಅದರ ಬದಲಾಗಿ ಪಶ್ಚಿಮ ಘಟ್ಟಗಳನ್ನು ಸಂರಕ್ಷಿಸಲು ಅಗತ್ಯ ಯೋಜನೆಗಳನ್ನು ರೂಪಿಸಬೇಕೆಂದು ಸರ್ಕಾರಕ್ಕೆ ಪತ್ರ ಬರೆಯುತ್ತಾರೆ.

ಇಂದಿನ ದಿನಮಾನಗಳಲ್ಲಿ ನಮ್ಮೆಲ್ಲರ ಅತಿ ಆಸೆಯ ಕಾರಣದಿಂದಾಗಿ ಪ್ರಕೃತಿ ಸಂಪತ್ತನ್ನು ಗರಿಷ್ಠ ಮಟ್ಟದಲ್ಲಿ ನಾಶಪಡಿಸುತ್ತಾ ಬಂದಿದ್ದೇವೆ. ಅರಣ್ಯಗಳ ಅತಿಕ್ರಮಣ, ಗಣಿಗಾರಿಕೆ, ಭೂ ಒತ್ತುವರಿ, ಕಾಡುಗಳ್ಳರ ಹಾವಳಿಯಿಂದಾಗಿ ಕಾಡಿನ ಸಂಪತ್ತು ದಿನೇ ದಿನೇ ಕ್ಷೀಣಿಸುತ್ತಿದೆ. ಸರ್ಕಾರದ ವಿವಿಧ ಯೋಜನೆಗಳಿಂದ ಪಶ್ಚಿಮ ಘಟ್ಟಗಳಲ್ಲಿ ದಟ್ಟವಾಗಿದ್ದ ನಿತ್ಯಹರಿದ್ವರ್ಣದ ಕಾಡುಗಳು ತಮ್ಮ ನಿತ್ಯಸೌಂದರ್ಯವನ್ನು ಕಳೆದುಕೊಳ್ಳುತ್ತಿದ್ದು, ಆ ಕಾಡುಗಳಲ್ಲಿದ್ದ ಎಷ್ಟೋ ಸೂಕ್ಷ್ಮ ವನ್ಯ ಜೀವಿಗಳ ಸಂತತಿ ಅವಸಾನದ ಅಂಚಿನಲ್ಲಿದೆ. ಇಂತಹ ಸಂದರ್ಭದಲ್ಲಿ ಕುವೆಂಪು ಅವರ ಪ್ರಕೃತಿ ಪ್ರೇಮ, ನಿಸರ್ಗಾರಾಧನೆ, ಜೀವಪರ ಚಿಂತನೆ ಹಾಗೂ ಮಹಾಕವಿಯ ದೂರದೃಷ್ಟಿ ಎಷ್ಟು ಪ್ರಸ್ತುತವಾಗಿದೆ ಎಂಬುದನ್ನು ಪ್ರತಿಯೊಬ್ಬರೂ ಅರಿತುಕೊಳ್ಳಬೇಕಾಗಿರುತ್ತದೆ. ಅಷ್ಟೇ ಅಲ್ಲದೆ ಇಂದಿನ ಸರ್ಕಾರಗಳು ಕವಿಯ ನಿಸರ್ಗತತ್ವವನ್ನು ತಮ್ಮ ಉದ್ದೇಶಿತ ಕಾರ್ಯಕ್ರಮಗಳಲ್ಲಿ ಅಳವಡಿಸಿಕೊಂಡು ಅಗತ್ಯ ಕಾರ್ಯ ಯೋಜನೆ ರೂಪಿಸಿ ಅರಣ್ಯ ಸಂಪತ್ತನ್ನು ಹಾಗೂ ಅದರಲ್ಲಿರುವ ಸೂಕ್ಷ್ಮ ಜೀವರಾಶಿಗಳನ್ನು ಸಂರಕ್ಷಿಸಬೇಕಾಗಿದೆ.

ಸ್ವಾತಂತ್ರ್ಯ ಚಳುವಳಿಯ ಹಿನ್ನೆಲೆಯಲ್ಲಿ, ಆರಂಭದಲ್ಲಿಯೇ ಸಂಪ್ರದಾಯ ಮತ್ತು ಪರಂಪರೆಯಿಂದ ಬಂದ

ದೇವಾನುದೇವತೆಗಳನ್ನು ನಿರಾಕರಿಸಿ ಭಾರತಾಂಬೆಯನ್ನೇ ದೇವಿಯೆಂದು ಕರೆದಿರುವುದು ಕವಿಯ ಸಮಕಾಲೀನ ಸಂದರ್ಭದಲ್ಲಿ ಬಹುಮುಖ್ಯವಾದುದು.

ನೂರು ದೇವರನೆಲ್ಲ ನೂಕಾಚೆ ದೂರ
ಭಾರತಾಂಬೆಯೆ ದೇವಿ ನಮಗಿಂದು ಪೂಜಿಸುವ ಬಾರ!
ಭಾರತಿಯೆ ನಮಗಿಂದು ಜೀವನದ ದೇವತೆಯು,
ವಿಶ್ವರೂಪಿಣಿಯವಳು, ವಿಶ್ವಮುಖಿಯೈ!
ನಮ್ಮೆಲ್ಲರಂಗಗಳೆ ನಮ್ಮಂಬೆಯಂಗವೈ,
ನಮ್ಮ ಸ್ವಾತಂತ್ರ್ಯದೊಳೆ ನಮ್ಮಮ್ಮ ಸುಖಿಯೈ!
(ಇಂದಿನ ದೇವರು – ಕುವೆಂಪು)

ಭಾರತಾಂಬೆಗೆ ಪ್ರತ್ಯೇಕ ಭೌತಿಕ ಅಸ್ತಿತ್ವವಿಲ್ಲ, ನಮ್ಮೆಲ್ಲರ ಅಂದರೆ ಭಾರತೀಯರ ಅಂಗಗಳೆ ನಮ್ಮಮ್ಮನ ಅಂಗಗಳು. ನಮ್ಮ ಸ್ವಾತಂತ್ರ್ಯದಲ್ಲಿಯೇ ಅಮ್ಮನ ಸುಖ ಅಡಗಿದೆ ಎಂಬ ಮಾತುಗಳು ಎಂತಹವರನ್ನೂ ದೇಶ ಸೇವೆಗೆ ಟೊಂಕ ಕಟ್ಟಿ ನಿಲ್ಲುವಂತೆ ಮಾಡಿಬಿಡುತ್ತವೆ.
ಹಾಗೆಯೇ ಭಾರತ ಜನನಿಯ ತನುಜಾತೆಯಾದ ಕರ್ನಾಟಕ ಮಾತೆಯನ್ನು ವಿಶೇಷವಾಗಿ ಆರಾಧಿಸಿರುವುದು, ನಾಡು ನುಡಿಯ ಮೇಲೆ ಅವರಿಗಿದ್ದ ಭಕ್ತಿ, ಶ್ರದ್ಧೆ, ಕಾಳಜಿಯನ್ನು ತೋರಿಸುತ್ತದೆ.
ಗುಡಿ, ಚರ್ಚು, ಮಸೀದಿಗಳು ಶೋಷಣೆಯ, ಮೂಢನಂಬಿಕೆಯ ಪ್ರಸಾರ ಕೇಂದ್ರಗಳೆಂದು, ಮತಗಳು ಅನೈಕ್ಯದ, ದ್ವೇಷ ವೈರಗಳ ಪುರೋಹಿತಶಾಹಿಯ ಮಾಧ್ಯಮಗಳೆಂದು ಅವರು ತಮ್ಮ ಕಾವ್ಯ ಜೀವನದ ಆರಂಭದಲ್ಲಿಯೇ ಘೋಷಿಸುತ್ತಾರೆ.
ಕುವೆಂಪು ಅವರು ತಮ್ಮ 'ಕುವೆಂಪು' ಎಂಬ ಕವನದಲ್ಲಿ ತಮ್ಮ ದೃಷ್ಟಿಯಲ್ಲಿ ಅಧ್ಯಾತ್ಮ ಎಂದರೇನು? ಎಂಬುದನ್ನು ಸೂಚಿಸಿದ್ದಾರೆ;

ಅಧಿ ಆತ್ಮದ ಸಿರಿಅಲಂಪು
ಎಲ್ಲವೊಂದುಗೂಡಲೆಂದು
ವಿಧಿಯ ಮನಸು ಕಡೆದ ಕನಸು
ಕಾಣ್ಬ ಕಣಸೆ, ಕಾಣ್: ಕುವೆಂಪು ! (ಕದರಡಕೆ – ಕುವೆಂಪು).

ಅದರಿಂದಾಗಿ ಕುವೆಂಪು ಅವರಲ್ಲಿ ಅಧ್ಯಾತ್ಮ ಅತ್ಯಂತ ಮುಖ್ಯವಾದ ಅಂಶವೆಂಬುದು ವ್ಯಕ್ತವಾಗುತ್ತದೆ.
ಅಧ್ಯಾತ್ಮವೆಂಬುದಕ್ಕೆ ಸಂಸ್ಕೃತದಲ್ಲಿ 'ಆತ್ಮ–ಪರಮಾತ್ಮಗಳ ಸಂಬಂಧಕ್ಕೆ ಸಂಬಂಧಿಸಿದ್ದು' ಎಂದು ಅರ್ಥವಿದೆ, ಕುವೆಂಪು ಅವರೇ ಹೇಳುವಂತೆ 'ಆತ್ಮ ಮತ್ತು ಪರಮಾತ್ಮನ ಸಂಬಂಧ ಅತ್ಯಂತ ನಿಗೂಢವಾದುದು ಹಾಗೂ ವೈಯಕ್ತಿಕವಾದುದು'. ಅವರು ಪರಿಪಾಲಿಸಿದ ಅಧ್ಯಾತ್ಮವನ್ನು 'ಅಧ್ಯಾತ್ಮದ ವೈಯಕ್ತೀಕರಣ' ಎಂದು ಕರೆದಿದ್ದಾರೆ. ಕವಿ ಹಾಗೂ ವಿಮರ್ಶಕ ಹೆಚ್.ಎಸ್ ರಾಘವೇಂದ್ರ ರಾವ್ ಅವರು ಕುವೆಂಪು ಅವರ ಅಧ್ಯಾತ್ಮದ ಕುರಿತು 'ಇದು ಮನುಷ್ಯನ ವೈಯಕ್ತಿಕ ಶೋಧನೆ ಹಾಗೂ ಕುತೂಹಲಗಳ ಫಲವಾದ ಆಧ್ಯಾತ್ಮಿಕತೆ ಮತ್ತು ಸಮಾಜದ ವರ್ತನೆಗಳ ಮೇಲೆ ಪರಿಣಾಮ ಬೀರುವ ಸಾಂಸ್ಥಿಕವಾದ ಧರ್ಮಗಳನ್ನು ಪರಸ್ಪರ ನಿಕಟ ಸಂಬಂಧವಿಲ್ಲದ ಪ್ರತ್ಯೇಕ ಪರಿಕಲ್ಪನೆಗಳೆಂದು ಕುವೆಂಪು ನಂಬಿದ್ದಾರೆ' (ಹಾಡೇ ಹಾದಿಯ ತೋರಿತು – ಹೆಚ್.ಎಸ್ ರಾಘವೇಂದ್ರ ರಾವ್) ಎಂಬ ಮಾತುಗಳು ಕುವೆಂಪು ಅವರ ಧರ್ಮ ನಿರಪೇಕ್ಷ ಅಧ್ಯಾತ್ಮದ ಪರಿಕಲ್ಪನೆಯನ್ನು ಮನದಟ್ಟು ಮಾಡಿಕೊಡುತ್ತವೆ.

ಸದಾ ಭಗವಂತನನ್ನು ಸಾಕ್ಷಾತ್ಕರಿಸಿಕೊಂಡು ವಾರ್ತಾಲಾಪ ಮಾಡುವ ಕವಿ ಭಗವಂತನೊಡನೆ ಸಂವಾದವನ್ನು ತಮ್ಮ ಹಲವಾರು ಕವಿತೆಗಳಲ್ಲಿ ತಂದಿದ್ದಾರೆ.
ಕವಿಯ ಅಧ್ಯಾತ್ಮ ಸಿದ್ಧಿಯ ಯಶಸ್ಸಿಗೆ 'ಪ್ರಾರ್ಥನೆ' ಕವನದ ಈ ಪಂಕ್ತಿಗಳೇ ಸಾಕ್ಷಿಯಾಗಿವೆ;

ನಿನ್ನ ಬಾಂದಳದಂತೆ
ನನ್ನ ಮನವಿರಲಿ;
ನಿನ್ನ ಸಾಗರದಂತೆ
ನನ್ನ ಎದೆಯಿರಲಿ.

ಕೊಳಲು ಕವನ ಸಂಕಲನದ ಈ 'ಪ್ರಾರ್ಥನೆ' ಕವನದಲ್ಲಿ ಭಗವಂತನ ಅದ್ಭುತ ಸೃಷ್ಟಿಯ ಸಂಕೇತಗಳ ಶಕ್ತಿಯೆಲ್ಲ ತನಗೆ ಬರಲಿ ಎಂದು ಪ್ರಾರ್ಥಿಸುತ್ತಾರೆ.
ನಿಸರ್ಗವೆಲ್ಲವೂ ಭಗವಂತನ ಸೃಷ್ಟಿಯಾಗಿದ್ದು ಅವುಗಳ ವಿಶ್ಲೇಷತೆಗಳೆಲ್ಲವೂ ತನಗೆ ಬರಲಿ ಎಂದು ಪ್ರಾರ್ಥಿಸುತ್ತಾ ಭಗವಂತನೆ ಅವರ ಹೃದಯದಲ್ಲಿ ನೆಲೆಸಿರುವಾಗ ತನಗಿನ್ನೇನುಬೇಕೆಂದು ಪ್ರಶ್ನಿಸುತ್ತಾರೆ.

'ಇನ್ನೇನು ಬೇಕೆನಗೆ ದೇವ,
ಎನ್ನೆದೆಯೊಳಿರೆ ನೀನೆ ಎನ್ನ ಜೀವದ ಜೀವ?'
(ಕೊಳಲು – ಇನ್ನೇನು ಬೇಕೆನಗೆ ದೇವ?)

'ಬಡವನೆಂದುಸರಲತಿ ನಾಚುವೆನು ನಾನು' ಎಂಬ ಕವಿತೆಯಲ್ಲಿ 'ಭಗವಂತನೇ ಹೃದಯದೊಳಿರುವಾಗ ಬಡವ ಎಂದು ಹೇಳಲು ಕವಿಗೆ ನಾಚಿಕೆಯಾಗುತ್ತದೆ. ಮನುಷ್ಯನಿಗಿರುವ ಸ್ವಾತಂತ್ರ್ಯ ದೇವನಿಗಿಲ್ಲವೆಂದು' ಕವಿ ಅತ್ಯಂತ ಮಾರ್ಮಿಕವಾಗಿ ಬಣ್ಣಿಸುತ್ತಾರೆ.
ಕುವೆಂಪು ಅವರು ದೇವರ ಪೂಜೆ, ಧ್ಯಾನ, ವಿಗ್ರಹ, ಭಕ್ತಿ ಮುಂತಾದ ಹಲವಾರು ಆಧ್ಯಾತ್ಮಿಕ ಪರಿಕಲ್ಪನೆಗಳ ಬಗ್ಗೆ ಸ್ವಾನುಭವದ ತಾತ್ವಿಕ ಸಂಗತಿಗಳನ್ನು ಪ್ರಕಟಿಸಿದ್ದಾರೆ. ಮಹಾನ್ ಚಿಂತಕರು, ದಾರ್ಶನಿಕರು ಆಗಿದ್ದ ಕುವೆಂಪು ದೇವರ ಇರುವಿಕೆ ಬಗ್ಗೆ 'ಅಜ್ಞೇಯತಾವಾದಿ' (Agnostic) ಯಾಗಿರಬಹುದೆಂದು ಹೇಳುತ್ತಾರೆ. ಅಂದರೆ 'ದೇವರು ಇದ್ದಾನೋ ಇಲ್ಲವೊ ನಮಗೆ ಗೊತ್ತಿಲ್ಲ' ಎಂಬ ಮನಸ್ಥಿತಿ.
ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯದ ಹಿಂದಿರುವ ಹಲವು ಪ್ರೇರಣೆಗಳಲ್ಲಿ ಶ್ರೀ ರಾಮಕೃಷ್ಣ ಪರಮಹಂಸ ಹಾಗೂ ಸ್ವಾಮಿ ವಿವೇಕಾನಂದರ ವ್ಯಕ್ತಿತ್ವ ಮತ್ತು ವಿಚಾರಗಳ ಪ್ರಭಾವವು ಬಹುಮುಖ್ಯವಾದವು. ಇವರಿಬ್ಬರ ವಿಶೇಷ ಆಧ್ಯಾತ್ಮಿಕ ನಿಲುವು, ರಾಷ್ಟ್ರೀಯತೆಯ ಕಲ್ಪನೆಯನ್ನು ಹೊಸ ಸಾಮಾಜಿಕ ವೈಚಾರಿಕತೆಯಿಂದ ಪರಿಶೀಲಿಸಲ್ಪಟ್ಟು ಒಂದು ಉದಾರ ಮಾನವತಾವಾದವನ್ನು ಅಂದಿನ ಸಾಹಿತ್ಯಕ್ಕೆ ತಂದುಕೊಟ್ಟ ಮಹಾಕವಿ ಈ ಮಹಾಸತ್ಯದ ವಿಚಾರಗಳನ್ನು ಅಂದಿನ ಜನಸಮುದಾಯಕ್ಕೆ ಹಾಗೂ ಮುಂದಿನ ಪೀಳಿಗೆಗೆ ತಲುಪಿಸುವಲ್ಲಿ ಅತ್ಯಂತ ಯಶಸ್ವಿಯಾಗಿದ್ದಾರೆ.
ಇಂತಹ ಮಹಾ ಸಂಗಮಕ್ಕೆ ಮತ್ತು ರಾಮಕೃಷ್ಣ ಆಶ್ರಮದ ಶ್ರೀರಕ್ಷೆಯೊಳಗೆ ಅರಳಿಕೊಳ್ಳುವಂತೆ ಅವಕಾಶವನ್ನು ಮಾಡಿಕೊಟ್ಟವರು ಅಂದಿನ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾಗಿದ್ದ ಶ್ರೀ ಸಿದ್ದೇಶ್ವರಾನಂದ ಸ್ವಾಮೀಜಿಯವರು. ಕವಿಯ ಬದುಕಿನಲ್ಲಿ ಇದೊಂದು ಮಹತ್ತರವಾದ ತಿರುವು.
ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿ ದಿಶೆಯಲ್ಲಿಯೇ ಸ್ವಾಮಿ ಸಿದ್ದೇಶ್ವರಾನಂದರ ಮೂಲಕ ಶ್ರೀ ರಾಮಕೃಷ್ಣ ಪರಮಹಂಸರ

ಪ್ರಭಾವಗಳಿಗೆ ಸಿಕ್ಕಿದ ಕುವೆಂಪು 'ತಾನು ಏನೇನು ಆಗಿರುವೆನೋ ಅದಕ್ಕೆಲ್ಲಾ ಸರ್ವಧರ್ಮ ಸಮನ್ವಯಮೂರ್ತಿ ಗುರುದೇವನ ಅನುಗ್ರಹವೇ ಕಾರಣ'ವೆಂದು ಬಲವಾಗಿ ನಂಬಿದ್ದಾರೆ. ಅವರ ಬಹಳಷ್ಟು ಆಧ್ಯಾತ್ಮಿಕ ಗೀತೆಗಳಲ್ಲಿ ಕವಿ ಚೇತನ ತನ್ನ ಗುರುದೇವನನ್ನು ಸ್ಮರಿಸುತ್ತದೆ. ಕುವೆಂಪು ಅವರ ಆಧ್ಯಾತ್ಮಿಕ ವಿಚಾರಗಳ ತವನಿಧಿಯಂತಿರುವ 'ಅಗ್ನಿಹಂಸ'ದ ಹಲವಾರು ಗೀತೆಗಳಲ್ಲಿ ಅವರ ಸುಖ ದುಃಖಗಳಲ್ಲಿ, ನೋವು ನಲಿವುಗಳಲ್ಲಿ, ಸೋಲು ಗೆಲುವುಗಳಲ್ಲಿ ಶ್ರೀ ಗುರುವಿನ ಅನುಗ್ರಹ ಸದಾ ಇರಲಿ ಎಂದು ಬೇಡುತ್ತಾರೆ.

ತನ್ನನ್ನು ತಾನು ಕುಪ್ಪಳಿಯ ಕಾಡಿನ ಮೂಲೆಯ ಕೆರೆಯ ಕೆಸರಿನಲಿ ಇದ್ದ ಕಮಲವೆಂದು ಕರೆದುಕೊಂಡಿರುವ ಕುವೆಂಪು 'ಗುರು ಪರಮಹಂಸರ ಆಶೀರ್ವಾದದ ಬಲದಿಂದ ಆ ಕಮಲ ನಾಡಿನ ಕಣ್ಣಿಗೆ ಕಣ್ಣಾಯ್ತು, ಕೆರೆಯ ಮಣ್ಣು ಹೊನ್ನಾಯ್ತು' ಎಂಬಲ್ಲಿ ತನ್ನೆಲ್ಲಾ ಸಾಧನೆಗೆ ಪರಮಹಂಸರ ಕೃಪೆಯೇ ಕಾರಣವೆಂದು ಕವಿ ದೃಢನಿಲುವನ್ನು ತಾಳಿದ್ದಾರೆ;

ಕಾಡಿನ ಮೂಲೆಯ ಕೆರೆಯ ಕೆಸರಿನಲಿ
ಮೂಡಿದ ಹೂವನು ನೀ ಕೊಯ್ದೆ :
ಕರುಣದಿ ಕೃಪೆಯಲಿ ಕೊರಳಹಾರದಲಿ
ಪ್ರೇಮದಿ ಚುಂಬಿಸಿ ನೀ ನೆಯ್ದೆ !
ಯಾರೂ ನೋಡದೆ ಬಾಡುವ ಹೂವಿದು
ನಾಡಿನ ಕಣ್ಣಿಗೆ ಕಣ್ಣಾಯ್ತು ;
ಹೇ ಗುರುದೇವನೆ, ನಿನ್ನ ಪರುಸದಲಿ
ಗೋಡದ ಮಣ್ಣಿದು ಹೊನ್ನಾಯ್ತು ! (ಕಲಾ ಸುಂದರಿ, ಪಂಕಜ – ಕುವೆಂಪು).

'ಶ್ರೀಗುರು' ಎಂಬ ಕವಿತೆಯಲ್ಲಿ ಪರಮಹಂಸರನ್ನು ಕುರಿತು 'ಭರತಖಂಡವೇ ಕತ್ತಲೆಯಲ್ಲಿರುವಾಗ, ಭಾರತೀಯರೆಲ್ಲರೂ ತಮ್ಮ ಜೀವನದ ಧ್ಯೇಯವನ್ನು ಮರೆತಿರುವಾಗ ಉದಯಸೂರ್ಯನ ತೆರದಿ ಉದಯಿಸಿ, ಭಾರತೀಯರ ಹೃದಯಗಳ ಅಜ್ಞಾನದ ಕತ್ತಲೆಯನ್ನು ತೊಡೆದುಹಾಕಿದರು. ಅಲ್ಲದೇ ಅವತಾರ ಪುರುಷರಾಗಿ ಜನಿಸಿ ಭಾರತೀಯರ ಅಜ್ಞಾನದ ಕತ್ತಲೆಯನ್ನು ಕಳೆದು ಅವರ ಬಾಳಿನಲ್ಲಿ ಜ್ಞಾನದ ಬೆಳಕನ್ನು ಹೊತ್ತಿಸಿದರು' ಎಂಬ ಭಾವನೆ ಕವಿಯಲ್ಲಿ ಮನೆ ಮಾಡಿದೆ. ಈ ಕವಿತೆ ಇಂದಿಗೂ ರಾಮಕೃಷ್ಣ ಆಶ್ರಮದ ಪ್ರಾರ್ಥನಾ ಗೀತೆಯಾಗಿದೆ.

ಅಷ್ಟೇ ಅಲ್ಲದೆ ಗುರುದೇವನನ್ನು ತಮ್ಮ ಮನೋಮಂದಿರಕೆ ಆಹ್ವಾನಿಸುತ್ತಾ

ವಂಗಮಾತೆಯಲಿ ಜನ್ಮವನೆತ್ತಿ
ದಿವ್ಯಸಮನ್ವಯ ಧರ್ಮವ ಭಿತ್ತಿ
ಮತಭೇದದ ವಿಷವನು ಹೋಗಾಡಿ
ಲೋಕದ ದೃಷ್ಟಿಗೆ ಸಮತೆಯ ನೀಡಿ
ಕಾಪಾಡಿದ ಪಾವನ ಮೂರುತಿಯೆ
ಬಾ, ಶ್ರೀ ಗುರುದೇವನೆ ಬಾ! (ಅಗ್ನಿಹಂಸ, ಆಹ್ವಾನ – ಕುವೆಂಪು).

ಈ ಕವಿತೆಯಲ್ಲಿ ಸರ್ವಧರ್ಮ ಸಮನ್ವಯವನ್ನು ಸಾರಿದ, ಮತ ಭೇದದ ವಿಷವನ್ನು ಹೋಗಲಾಡಿಸಿ ಲೋಕದ ದೃಷ್ಟಿಗೆ ಸಮತೆಯನ್ನು ನೀಡಿದ ಗುರುವನ್ನು ಆಹ್ವಾನಿಸುವುದಷ್ಟೇ ಅಲ್ಲದೆ ಅವರಿಂದ ಕಲಿತ ಸಮನ್ವಯ ತತ್ವವನ್ನು ಯಾವುದೇ ಮತ ಭೇದಗಳಿಲ್ಲದ ಮನುಜ ಮತವನ್ನು ಹಾಗೂ ವಿಶ್ವದ ಏಳಿಗೆಗೆ ಹೆದ್ದಾರಿಯಾಗಿರುವ ವಿಶ್ವಪಥವನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ವಿಶ್ವಮಾನವ ಸಂದೇಶವನ್ನು ಸಾರಿದ್ದಾರೆ.

'ಕರುಣಾಳು ಬಾ ಬೆಳಕೆ ಮುಸುಕಿದೀ ಮಬ್ಬಿನಲಿ ಕೈಹಿಡಿದು ನಡೆಸೆನ್ನನು' ಎಂಬ ಬಿ.ಎಂ ಶ್ರೀಯವರ ಕವಿತೆಯನ್ನು ನೆನಪಿಗೆ ತರುವ ಕವನ 'ಎಚ್ಚರಿಸು ಬಾ ಗುರುವೆ !';

ಎಚ್ಚರಿಸು ಬಾ, ಗುರುವೆ, ಚಿಚ್ಚರಣ ಕಿರಣದಲಿ
ಬಿಚ್ಚರಳುವಂತೆನ್ನ ಹೃದಯದಕ್ಷಿ;
ಚರಿಸು ಬಾ ಚೇತನದಿ ಗರಿಗೆದರುವಂತೆನ್ನ
ಪ್ರಾಣಚಂಚುವಿನಗ್ನಿ ಪಕ್ಷಿ;
ಮಿಂಚಿ ಬಾ ಮನದಲ್ಲಿ ತಮದ ಘನತಿಮಿರ ತಾ

ಪರಿದು ದರ್ಶನವೀಯೆ ಗೂಹ್ಯಸಾಕ್ಷಿ ! – (ಅನಿಕೇತನ – ಎಚ್ಚರಿಸು ಬಾ ಗುರುವೆ)

ಭಗವಂತನ ಆರ್ಶೀವಾದದ ಕಿರಣದಿಂದ ಎನ್ನ ಹೃದಯದ ಅಕ್ಷಿಗಳು ಬಿಚ್ಚಿ ಅರಳುವಂತೆ, ಎನ್ನ ಪ್ರಾಣ ಪಕ್ಷಿಯ ಚೈತನ್ಯ ಗರಿಗೆದರುವಂತೆ ಮನಸ್ಸಿನ ಗಾಢಾಂಧಕಾರ ಹರಿದು ದರ್ಶನ ನೀಡುವಂತೆ ಮನದಲ್ಲಿ ಮಿಂಚಿ ಬಾ ಎಂದು ಗುರುವನ್ನು ಪ್ರಾರ್ಥಿಸುವುದು ಕವಿಯ ಕಾವ್ಯ ರಚನೆಗೆ ಅಗತ್ಯವಾದ ಶಕ್ತಿಯನ್ನು, ಚೈತನ್ಯವನ್ನು ದಯಪಾಲಿಸುವಂತೆ ಗುರುವನ್ನು ಪ್ರಾರ್ಥಿಸುವ ಕವನ.

ಬದುಕಿಗೆ ಮಾರ್ಗದರ್ಶಕರಾಗಿ ಗುರುವನ್ನು ಬಯಸುವುದು ಎಲ್ಲರ ಅರಿವಿನ ಸಂಗತಿ. ಗುರುವಿನ ಕರುಣೆಯನ್ನು ತೀರ್ಥವೆಂದು, ತೊಟ್ಟಿಲೆಂದು ಹೇಳುವ ಮೂಲಕ ಗುರುವಿನ ಅವಶ್ಯಕತೆಯನ್ನು ಒತ್ತಿ ಹೇಳಲಾಗಿದೆ.

ಕಲ್ಪತರುವೆ ತಾ ಕಂಭವಾಗಿರುವ ಕಾಮಧೇನುವಿಗೆ ಕರುವಾದೆ;
ಸಚ್ಚಿದಾನಂದ ನಿಚ್ಚ ತಾನಾದ ಪರಮ ಗುರುದೇವ ದಿವ್ಯಬೋಧೆ
ನಿತ್ಯನಿತ್ಯವೂ ಸತ್ಯವಾದವನ ಚರಣತಲದಿ ನಾ ಶರಣಾದೆ.

ಕಂಡ ಗುರುವರನ ಕಂಡು ಕಾಲ್ಮುಟ್ಟಿ
ಕೊಂಡು ದೀಕ್ಷೆಯನು ಧನ್ಯನಾದೆ! (ಅನಿಕೇತನ – ದೀಕ್ಷಾ ಶ್ರದ್ಧೆ)

ಭಗವಂತನ ಅವತಾರ ಸೃಷ್ಟಿಯ ವಿವಿಧ ರೂಪಗಳಲ್ಲಿ ನಿತ್ಯವೂ ನಡೆಯುತ್ತದೆಂಬುದು ಕುವೆಂಪು ಜಗತ್ತಿಗೆ ನೀಡಿರುವ ನಿತ್ಯ ತತ್ವ.

'ಇಲ್ಲಿ ಬಾ ಸಂಭವಿಸು ಇಂದೆನ್ನ ಹೃದಯದಲಿ,
ನಿತ್ಯವೂ ಅವತರಿಪ ಸತ್ಯಾವತಾರ!
ಮಣ್ಣಾಗಿ ಮರವಾಗಿ ಮಿಗವಾಗಿ ಖಗವಾಗಿ
ಭವಭವದಿ ಭವಿಸಿ, ಓ ಭವವಿದೂರ,
ಮಣ್ತನಕೆ ಮರತನಕೆ ಮಿಗತನಗೆ ಖಗತನಕೆ
ಮುನ್ನಡೆಗೆ ಕಣ್ಣಾದ ಗುರುವೆ, ಬಾರ ! –(ಅಗ್ನಿಹಂಸ – ಜನ್ಮೋತ್ಸವ)

ಎಂದು ಗುರುವನ್ನು ಪ್ರಾರ್ಥಿಸುತ್ತಾರೆ.

ಅಷ್ಟೇ ಅಲ್ಲದೆ ಭಗವಂತನಲ್ಲಿ ಸಂಪೂರ್ಣ ಶರಣಾಗಿ

'ತನುವು ನಿನ್ನದು, ಮನವು ನಿನ್ನದು
ನನ್ನ ಜೀವನ ಧನವು ನಿನ್ನದು
ನಾನು ನಿನ್ನವನೆಂಬ ಹೆಮ್ಮೆಯ
ಋಣವು ಮಾತ್ರವೆ ನನ್ನದು' (ಅಗ್ನಿಹಂಸ – ತನುವು ನಿನ್ನದು)

ಎಂದು ಎಲ್ಲವನ್ನು ಭಗವಂತನಿಗೆ ಸಮರ್ಪಿಸುತ್ತಾರೆ
ಕವಿ ಕುವೆಂಪು, 'ಶ್ರೀ ರಾಮಕೃಷ್ಣ ಪರಮಹಂಸರನ್ನು ತಮ್ಮ ಆಂತರಿಕ ಗುರುವಾಗಿ, ಸ್ವಾಮಿ ವಿವೇಕಾನಂದರನ್ನು ಮಾರ್ಗದರ್ಶಕರನ್ನಾಗಿ ಸ್ವೀಕರಿಸಿ 'ಗುರುದೇವನ ಅಡಿದಾವರೆಯಲ್ಲಿ ಹೂಕುಡಿಯುವ ಮರಿದುಂಬಿಯು ನಾನು' ಎಂದು ಭಕ್ತಿ, ಗೌರವಗಳನ್ನು ಸಮರ್ಪಿಸಿದ್ದಾರೆ.
'ನಿಜವಾದ ಆಧ್ಯಾತ್ಮ ಎಂದರೆ ಸಮಾನತೆಯನ್ನು ಕಾಣುವ ಮತ್ತು ಕಟ್ಟುವ ಒಂದು ನಿಲುವು' ಎಂಬ ಅಭಿಪ್ರಾಯವನ್ನು ಹೊಂದಿದ್ದ ಕವಿ 'ಅಧ್ಯಾತ್ಮ ದಾನ ಎಲ್ಲದಕ್ಕಿಂತಲೂ ಹಿರಿದಾದುದು ಲೋಕೋದ್ಧಾರದ ಕಾರ್ಯದಲ್ಲಿ ಇದಕ್ಕಿಂತಲೂ ಶ್ರೇಷ್ಠವಾದುದು ಇಲ್ಲ' ಎಂಬ ನಿಲುವನ್ನು ತಾಳುತ್ತಾರೆ.

ಎಲ್ಲವನು ಮೀರುವಧ್ಯಾತ್ಮ ದಾನದ ಹಿರಿಮೆ
ವಿಜ್ಞಾನದಾನಂದ ಮಯಕೆ,
ಇನ್ನದಕೆ ಸಿರಿದಿಹುದೆ ಲೋಕ ಸಂಗ್ರಹ ಕಾರ್ಯ,
ಜರಾಮರಣ ಶೋಕ ಲಯಕೆ?

ಮಹಾಕವಿ ಕುವೆಂಪು ಅವರು ಯಾವತ್ತು ದೇವಸ್ಥಾನಕ್ಕೆ ಹೋದವರಲ್ಲ, ಪೂಜೆ ಪುನಸ್ಕಾರಗಳನ್ನು ಮಾಡಿದವರಲ್ಲ, ಆದರೆ ಅದ್ವಿತೀಯ ಶಕ್ತಿಯ ಇರುವಿಕೆಯನ್ನು ಸಂಪೂರ್ಣ ನಂಬಿ ಬದುಕಿದವರು. ಕರ್ಮಸಿದ್ಧಾಂತವನ್ನು ನಂಬಿದವರು, ಅದರಂತೆ ಸಾಹಿತ್ಯ ಬರೆದವರು. 'ನಿನ್ನವನು ನಾನಲ್ಲವೆ?' ಕವನ ಕವಿಯು ಪೂಜೆ ಪುನಸ್ಕಾರಗಳ ಕುರಿತಂತೆ ಹೊಂದಿರುವ ಭಾವನೆ ಹಾಗೂ ಭಗವಂತನ ಮೇಲಿನ ನಂಬಿಕೆಗೆ ಹಿಡಿದ ಕನ್ನಡಿಯಾಗಿದೆ.

ಗಂಟೆಗಳ ನಾ ಹೊಡೆಯೆ, ಶಂಖವನು ನಾನೂದೆ,
ಮಂಗಳಾರತಿಯ ನಾ ಬೆಳಗಲರಿಯೆ;
ನಿನ್ನ ಸಂಗವ ತೊರೆಯೆ, ನಿನ್ನನೆಂದೂ ಮರೆಯೆ,
ನಿನ್ನವನು ನಾನಲ್ಲವೇನೊ, ದೊರೆಯೆ! (ಕೊಳಲು –
ನಿನ್ನವನು ನಾನಲ್ಲವೆ?)

ಕುವೆಂಪು ಅವರ ವಿಶ್ವಮಾನವ ಸಂದೇಶವು ಅವರ ಅಧ್ಯಾತ್ಮ ಚಿಂತನೆಯ ಪರಿಣಾಮವಾಗಿ ಭಗವದ್ಧಿಚ್ಛೆಯ ಪ್ರತೀಕವಾಗಿ ಸಾಕಾರಗೊಂಡಿತೆಂದು ಹೇಳಬಹುದು. ಅವರ 'ಶ್ರೀ ರಾಮಾಯಣ ದರ್ಶನಂ'ನಲ್ಲಂತೂ ಭಗವಂತನ ಚಿಂತನೆಯ ಮಹತ್ವವನ್ನು, ಅಧ್ಯಾತ್ಮ ಸಿದ್ಧಿಯ ಪರಾಕಾಷ್ಠೆಯನ್ನು ಕಾಣಬಹುದು. ಇಂದು ಸಮಾಜ ಜಾತಿ, ಮತಪಂಥಗಳಿಂದ ಛಿದ್ರ ಛಿದ್ರವಾಗಿ, ಮತೀಯ, ಜಾತಿಯ ಕಲಹಗಳಿಂದ ಹಾಗೂ ಅನಾಚಾರ, ಅತ್ಯಾಚಾರ, ಭಯೋತ್ಪಾದನೆ ಮುಂತಾದ ಅನಿಷ್ಟಗಳಿಂದ ಸಮಾಜದ ಸ್ವಾಸ್ಥ್ಯ ಕೆಡುತ್ತಿರುವ ಈ ಸಮಯದಲ್ಲಿ ಮಹಾಕವಿಯು ನಂಬಿ ತಮ್ಮ ಕೃತಿಗಳಲ್ಲಿ ಭಿತ್ತರಿಸಿರುವ ಅಧ್ಯಾತ್ಮಿಕ ಮೌಲ್ಯಗಳು ಅಂದಿಗೂ, ಇಂದಿಗೂ, ಮುಂದೆಂದಿಗೂ ಅತ್ಯಂತ ಅಗತ್ಯವೂ, ಅನುಕರಣೀಯವೂ ಆಗಿವೆ.

## ಪರಾಮರ್ಶನ ಗ್ರಂಥಗಳು


1. ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ (ರಿ), ಕುಪ್ಪಳಿ, ಶಿವಮೊಗ್ಗ ಇವರು ಪ್ರಕಟಿಸಿರುವ ಕುವೆಂಪು ಸಮಗ್ರ ಸಾಹಿತ್ಯ ಮಾಲೆಯ ಕೃತಿಗಳು.
2. ಶ್ರೀ ರಾಮಾಯಣ ದರ್ಶನಂ ಒಂದು ವಿಮರ್ಶಾತ್ಮಕ ಅಧ್ಯಯನ, ಡಾ. ಹೆಚ್.ಜೆ ಲಕ್ಕಪ್ಪಗೌಡ.
3. ಹಾಡೆ ಹಾದಿಯ ತೋರಿತು, ಹೆಚ್.ಎಸ್ ರಾಘವೇಂದ್ರರಾವ್.
4. ಮಹಾಕವಿ ಕುವೆಂಪು ದರ್ಶನ, ದೇ.ಜ.ಗೌ.
5. ಜಿ.ಎಸ್ ಶಿವರುದ್ರಪ್ಪ ಸಾಹಿತ್ಯ ಮಾಲೆ, ಸಮಗ್ರ ಗದ್ಯ, ೧ ರಿಂದ ೨.
6. ಕುವೆಂಪು ಸಾಹಿತ್ಯ ಲೋಕ – ೧ – ಸಂ. ಹ. ಕ ರಾಜೇಗೌಡ.
7. ಕುವೆಂಪು ಅಧ್ಯಯನ ಆಯಾಮ – ರಾ.ಗೌ.
8. ಕುವೆಂಪು ಮತ್ತು ಪರಂಪರೆ – ಸುಜನಾ.
9. ಕುವೆಂಪು ಕೃತಿ ವಿಮರ್ಶೆ – ಪ್ರಧಾನ ಸಂಪಾದಕರು, ಪ್ರೊ॥ ಅರವಿಂದ ಮಾಲಗತ್ತಿ.
10. ಕುವೆಂಪು ಕಾವ್ಯ, ಸಂಸ್ಕೃತಿ ಚರಿತ್ರೆಯ ರೂಪಕ – ಪ್ರೊ॥ ನರಹಳ್ಳಿ ಬಾಲಸುಬ್ರಹ್ಮಣ್ಯಂ